# ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ–ಒರಟು ಧಾನ್ಯಗಳು

## (National Food Security Mission-NFSM-Coarse Cereals)

ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭವಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯು ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೂ ಮುಂದುವರೆದಿದೆ. ಈವರೆಗೂ ಚಾಲ್ತಿಯಲ್ಲಿದ್ದ INSIMP ಯೋಜನೆಯನ್ನು ಮುಂದುವರಿಸದೆ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ (NFSM) ಅಡಿ 2014–15ನೇ ಸಾಲಿನಿಂದ ವಿಲೀನಗೊಳಿಸಲಾಗಿದೆ. ಅದರಂತೆ ಐಸೋಪಾಮ್ ಯೋಜನೆಯಲ್ಲಿದ್ದ ಮುಸುಕಿನ ಜೋಳದ ಘಟಕವನ್ನು 2014–15ನೇ ಸಾಲಿನಿಂದ NFSM ಯೋಜನೆಯಡಿ ತರಲಾಗಿದೆ.

ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ – ಒರಟು ಧಾನ್ಯಗಳು ಈ ಯೋಜನೆಯನ್ನು 2875.50 ಲಕ್ಷ ರೂ.ಗಳ ವೆಚ್ಚದಲ್ಲಿ ರಾಜ್ಯದ 11 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಉದ್ದೇಶಗಳು:

1. ಗುರುತಿಸಲಾದ ಜಿಲ್ಲೆಗಳಲ್ಲಿ ಸುಸ್ಥಿರ ರೀತಿಯಲ್ಲಿ ವಿಸ್ತೀರ್ಣದ ವಿಸ್ತರಣೆ ಮತ್ತು ಉತ್ಪಾದಕತೆಯ ಹೆಚ್ಚಳ ಮಾಡುವ ಮೂಲಕ ಒರಟು ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು.
2. ಕ್ಷೇತ್ರಮಟ್ಟದಲ್ಲಿ ಭೂ ಫಲವತ್ತತೆ ಮತ್ತು ಉತ್ಪಾದಕತೆಯ ಮಟ್ಟವನ್ನು ಪೂರ್ವಸ್ಥಿತಿಗೆ ತರುವುದು (Restoring).
3. ಕ್ಷೇತ್ರಮಟ್ಟದ ಆರ್ಥಿಕತೆಯನ್ನು ಹೆಚ್ಚಿಸುವ ಮೂಲಕ ರೈತರಲ್ಲಿ ವಿಶ್ವಾಸಾರ್ಹತೆಯನ್ನು ಪುನ: ಸ್ಥಾಪಿಸುವುದು.

NFSM ಒರಟು ಧಾನ್ಯಗಳ ಯೋಜನೆಯಡಿ ಈ ಕೆಳಕಂಡ ಘಟಕಗಳನ್ನು ಅನುಷ್ಠಾನಗೊಳಿಸಲಾಗುವುದು:

1. **NFSM (ಒರಟು ಧಾನ್ಯ) ಯೋಜನೆಯಡಿ ಪ್ರಾತ್ಯಕ್ಷಿಕೆಗಳು:**
   ಮುಸುಕಿನ ಜೋಳ, ರಾಗಿ, ಜೋಳ, ಸಜ್ಜೆ ಮತ್ತು ಇತರೆ ತೃಣ ಧಾನ್ಯಗಳ ಪ್ರಾತ್ಯಕ್ಷಿಕೆಗಳು
2. **ಪ್ರಮಾಣಿತ ಬಿತ್ತನೆ ಬೀಜ ವಿತರಣೆ:**

**<u>ಮಾರ್ಗಸೂಚಿಗಳು:</u>**

**ಪ್ರಾತ್ಯಕ್ಷಿಕೆಗಳ ಬಗ್ಗೆ ಸಾಮಾನ್ಯ ಮಾರ್ಗಸೂಚಿಗಳು (General Guidelines)**

**14.1 ವೇಗವರ್ಧಕ ಬೆಳೆ ಉತ್ಪಾದನಾ ಕಾರ್ಯಕ್ರಮ ACPP** (Accelerated Crop Production Programme): ದೊಡ್ಡ ಪ್ರಮಾಣದ ಬೆಳೆ ಉತ್ಪಾದನಾ ಮತ್ತು ಸಂರಕ್ಷಣಾ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಬೆಳೆ ಪದ್ಧತಿ ಆಧಾರದ ಮೇರೆಗೆ ತೆಗೆದುಕೊಳ್ಳುವುದು.

### 14.1.1 ಪ್ರಾತ್ಯಕ್ಷಿಕೆಗಳು :

1. ಹಂಚಿಕೆಯಾದ ಪ್ರಾತ್ಯಕ್ಷಿಕೆಗಳ ಪೈಕಿ ಕನಿಷ್ಠ ಶೇ.30 ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಬೇಕು.
2. 100 ಹೆ. ಸಾಂದ್ರ ಪ್ರಾತ್ಯಕ್ಷಿಕೆ ಕ್ಷೇತ್ರವನ್ನು (contiguous block ) ಒಂದೇ ಕಡೆ ಬರುವಂತೆ ಆಯ್ಕೆ ಮಾಡಿ ಸುಧಾರಿತ ಬೇಸಾಯ ಕ್ರಮಗಳನ್ನು ಪ್ರಾತ್ಯಕ್ಷಿಕೆ ತೆಗೆದುಕೊಳ್ಳಬೇಕು. ಪಕ್ಕದಲ್ಲಿಯೇ ರೈತರ ಪದ್ಧತಿಗಳನ್ನು ಅಳವಡಸಿಕೊಂಡ ಹೋಲಿಕೆ ತಾಕುಗಳು ಇರುವಂತೆ ನೋಡಿಕೊಳ್ಳುವುದು.
3. ಗುಚ್ಚ ಕ್ಷೇತ್ರದಲ್ಲಿ (cluster area) ಬರುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಡಿ ಸೇರಿಸಿಕೊಳ್ಳಬೇಕು. ಪ್ರತಿ ರೈತರ ಕನಿಷ್ಠ ಒಂದು ಎಕರೆ (0.4 ಹೆ) ವಿಸ್ತೀರ್ಣವನ್ನು ಪ್ರಾತ್ಯಕ್ಷಿಕೆಯಡಿ ಸೇರಿಸಿಕೊಳ್ಳಬೇಕು.
   - ಆಯ್ಕೆ ಮಾಡಿದ ಪ್ರಾತ್ಯಕ್ಷಿಕೆ ಕ್ಷೇತ್ರವು ರೈತರಿಗೆ ಮತ್ತು ವಿಸ್ತರಣಾ ಕಾಯಕರ್ತರು ಸುಲಭವಾಗಿ ಸಂದರ್ಶಿಸುವಂತಹ ಜಾಗದಲ್ಲಿರಬೇಕು.
   - ಆಯ್ಕೆ ಮಾಡಿದ ಪ್ರಾತ್ಯಕ್ಷಿಕೆ ತಾಕುಗಳ ಮಣ್ಣು ಮಾದರಿಗಳನ್ನು ಮುಂಚಿತವಾಗಿ ವಿಶ್ಲೇಷಣೆಗೆ ಒಳಪಡಿಸಿ ಅಲ್ಲಿನ ಭೂ ಫಲವತ್ತತೆ ಬಗ್ಗೆ ತಿಳಿದುಕೊಂಡು, ಅದರನ್ವಯ ರಸಗೊಬ್ಬರ ಮತ್ತು ಮಣ್ಣು ಸುಧಾರಕಗಳನ್ನು ಬಳಸಬೇಕು.
   - ಪ್ರಾತ್ಯಕ್ಷಿಕೆಯಡಿ ಅಳವಡಿಸಿಕೊಳ್ಳಲಿರುವ ಸುಧಾರಿತ ಬೇಸಾಯ ಕ್ರಮಗಳನ್ನು ಸಂಬಂಧಿಸಿದ ಕೃಷಿ ವಿಶ್ವ ವಿದ್ಯಾನಿಲಯ/ಕೆವಿಕೆ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ನಿರ್ಧರಿಸುವುದು. ಪ್ರಾತ್ಯಕ್ಷಿಕೆಯಡಿ ಆದಷ್ಟು ಹೊಸ ತಳಿಗಳನ್ನು ಬಳಸುವುದು.
   - ಕೈಗೊಳ್ಳಲಿರುವ ಸುಧಾರಿತ ಬೇಸಾಯ ಕ್ರಮವನ್ನು ನಿರ್ಧರಿಸಿದ ಮೇಲೆ ನೀಡಬೇಕಾದ ಪರಿಕರಗಳನ್ನು (ಲಘು ಪೋಷಕಾಂಶಗಳು, ಜೈವಿಕಗೊಬ್ಬರಗಳನ್ನು ಒಳಗೊಂಡಂತೆ) ಅಂತಿಮಗೊಳಿಸುವುದು. ಅದೇ ರೀತಿ ರೈತರು ಭರಿಸಬೇಕಾದ ಪರಿಕರಗಳನ್ನು ಪಟ್ಟಿ ಮಾಡುವುದು.
   - ಇಲಾಖೆಯ ಇತರೆ ಯೋಜನೆಗಳಡಿ ಏರ್ಪಡಿಸಲಿರುವ ತರಬೇತಿಗಳಡಿ **NFSM** ಯೋಜನೆಯ ರೈತರುಗಳನ್ನು ಆಯ್ಕೆ ಮಾಡುವ ಮೂಲಕ ತರಬೇತಿಗಳನ್ನು ಏರ್ಪಡಿಸುವುದು.
   - ಉಸ್ತುವಾರಿ ಯೋಜನೆಯಡಿ ಬರುವ ಜಿಲ್ಲೆಯ ಸಲಹಾಗಾರರು/ತಾಂತ್ರಿಕ ಸಹಾಯಕರ ಮೂಲಕ ಪ್ರಾತ್ಯಕ್ಷಿಕೆಗಳ ಉಸ್ತುವಾರಿ ಕೈಗೊಳ್ಳುವುದು. ಅಲ್ಲದೆ ಇಲಾಖೆಯ ವಿಸ್ತರಣಾ ಕಾರ್ಯಕರ್ತರು ಸಹಾ ತಾಕುಗಳಿಗೆ ಭೇಟಿ ನೀಡುವುದು ಮತ್ತು ಅವಶ್ಯಕವಿದ್ದಲ್ಲಿ ವಿಜ್ಞಾನಿಗಳ ಭೇಟಿಗೆ ವ್ಯವಸ್ಥೆ ಮಾಡುವುದು.
   - ಮಾಹಿತಿ ಫಲಕಗಳನ್ನು ಪ್ರದರ್ಶಿಸುವುದು.

ಮಾಹಿತಿ ಫಲಕದಲ್ಲಿ (1) ರೈತರ ಸಂಖ್ಯೆ (2) ಗ್ರಾಮದ ಹೆಸರು (3) ತಳಿ/ಹೈಬ್ರಿಡ್ ಹೆಸರು (4)ಪ್ರಾತ್ಯಕ್ಷಿಕೆ ವಿಧ (5) ಬಳಸಿದ ರಸಗೊಬ್ಬರಗಳು (6) ಬಳಸಿದ ಜೈವಿಕ ಗೊಬ್ಬರಗಳು (7) ಬಳಸಿದ ಲಘು ಪೋಷಕಾಂಶಗಳು (8) ಬಿತ್ತನೆ ದಿನಾಂಕ/ ನಾಟಿ ದಿನಾಂಕ (9) ಬಿತ್ತನೆ ಬೀಜದ ಪ್ರಮಾಣ ಮತ್ತು ಅಂತರ (1) ಬಳಸಿದ ಇತರೆ ಮುಖ್ಯ ಪರಿಕರಗಳು 11) ಜಿಲ್ಲಾ ಸಲಹೆಗಾರರ/ ತಾಂತ್ರಿಕ ಸಹಾಯಕರ ಮೊಬೈಲ್ ದೂರವಾಣಿ ಸಂಖ್ಯೆ

- ಕ್ಷೇತ್ರೋತ್ಸವ (Field Day):

  ಕಾಳು ತುಂಬುವ ಹಂತದಲ್ಲಿ ಕ್ಷೇತ್ರೋತ್ಸವವನ್ನು ಏರ್ಪಡಿಸುವುದು. ಕ್ಲಿಷ್ಟಕರ ಸಮಸ್ಯೆಗಳಿದ್ದಲ್ಲಿ ಸಂಬಂಧಿಸಿದ ಕೃಷಿ ವಿಶ್ವ ವಿದ್ಯಾನಿಲಯ/ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳನ್ನು ಕರೆತಂದು ಪರಿಹಾರ ಕಂಡುಕೊಳ್ಳತಕ್ಕದ್ದು. ಭಾಗವಹಿಸುವ ರೈತರುಗಳಿಗೆ ಪ್ರಾತ್ಯಕ್ಷಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಕರಪತ್ರಗಳ ಮೂಲಕ ನೀಡುವುದು.

- ವರದಿ ಮಾಡುವಿಕೆ (Reporting):

  ಮಾಸಿಕ ಪ್ರಗತಿಯ ವರದಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ, ತ್ರೈಮಾಸಿಕ ವರದಿಯನ್ನು ತ್ರೈಮಾಸಿಕ ಮುಗಿದ ನಂತರದ ತಿಂಗಳ 15ನೇ ತಾರೀಖಿನೊಳಗೆ ಮತ್ತು ವಿವರವಾದ ವಾರ್ಷಿಕ ಪ್ರಗತಿ ವರದಿಯನ್ನು ಆರ್ಥಿಕ ವರ್ಷ ಮುಗಿದ ನಂತರ ಏಪ್ರಿಲ್ 30 ರೊಳಗೆ ನಿಗದಿಪಡಿಸಿದ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

**14.1.2. ಒರಟು ಧಾನ್ಯಗಳ ಪ್ರಾತ್ಯಕ್ಷಿಕೆಗಳು:**

ಒರಟು ಧಾನ್ಯಗಳಡಿ ಮುಸುಕಿನ ಜೋಳ, ಜೋಳ, ಸಜ್ಜೆ, ರಾಗಿ. ನವಣೆ, ಸಾಮೆ ಬೆಳೆಗಳು ಬರುತ್ತವೆ. ಒರಟು ಧಾನ್ಯಗಳು ಮತ್ತು ಒರಟು ಧಾನ್ಯಗಳ ಬೆಳೆ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಬಹುದಾಗಿದೆ. ಒರಟು ಧಾನ್ಯಗಳಡಿ ಸೂಕ್ತ ದ್ವಿದಳ ಧಾನ್ಯಗಳನ್ನು ಅಂತರ ಬೆಳೆಯಾಗಿ ಪ್ರಾತ್ಯಕ್ಷಿಕೆಯಡಿ ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.

**ಪ್ರಾತ್ಯಕ್ಷಿಕೆ ವೆಚ್ಚ:** ಪ್ರತಿ ಹೆ. ಪ್ರಾತ್ಯಕ್ಷಿಕೆಗೆ ರೂ.5000 ಆರ್ಥಿಕ ನೆರವು ನೀಡಬಹುದಾಗಿರುತ್ತದೆ. ಪ್ರತಿ ಹೆ. ಪ್ರಾತ್ಯಕ್ಷಿಕೆಯ ಆರ್ಥಿಕ ನೆರವಿನ ಹಂಚಿಕೆಯನ್ನು ಅನುಬಂಧ–2 (ಅ) ಮತ್ತು (ಆ)ರಲ್ಲಿ ನೀಡಿದೆ. ಹೆಚ್ಚುವರಿ ವೆಚ್ಚ ತಗುಲಿದಲ್ಲಿ ಫಲಾನುಭವಿಯು ಭರಿಸಬೇಕಿರುತ್ತದೆ. ಒಬ್ಬ ಫಲಾನುಭವಿಯ ಪ್ರಾತ್ಯಕ್ಷಿಕೆಯ ವಿಸ್ತೀರ್ಣ ಕನಿಷ್ಠ 0.4 ಹೆ. ಆದರೆ ಗರಿಷ್ಠ 2 ಹೆ. ಮೀರದಂತೆ ಆಯ್ಕೆ ಮಾಡುವುದು.

ಪ್ರಾತ್ಯಕ್ಷಿಕೆ ಕೈಗೊಳ್ಳುವಾಗ ಅನುಸರಿಸಬೇಕಾದ / ಒತ್ತು ನೀಡಬೇಕಾದ ಅಂಶಗಳನ್ನು ಅನುಬಂಧ–3 ರಲ್ಲಿ ನೀಡಿದೆ.

**14.2.1. ಪ್ರಮಾಣಿತ ಬಿತ್ತನೆ ಬೀಜ/ಹೈಬ್ರಿಡ್ ಬಿತ್ತನೆ ಬೀಜ ವಿತರಣೆ:**

(i) ರಾಜ್ಯವು ಅನುಮೋದಿಸಿದ ಬೀಜೋತ್ಪಾದಕ ಸಂಸ್ಥೆಗಳ (NSC, KSSC, ಕೃಷಿ ವಿಶ್ವ ವಿದ್ಯಾನಿಲಯ, ಖಾಸಗಿ ಕಂಪನಿಗಳು) ವತಿಯಿಂದ ಬೀಜ ವಿತರಣೆಗೆ ವ್ಯವಸ್ಥೆ ಮಾಡುವುದು. ಗ್ರಾಮ ಪಂಚಾಯಿತಿಯ ನೆರವಿನೊಂದಿಗೆ ಜಿಲ್ಲಾ ಆಹಾರ ಭದ್ರತಾ ಅಭಿಯಾನ ಅನುಷ್ಠಾನ ಸಮಿತಿಯು (DFSMEC) ಫಲಾನುಭವಿಗಳ ಆಯ್ಕೆಯನ್ನು ಮಾಡುವುದು. ಒಬ್ಬ ರೈತ ಫಲಾನುಭವಿಗೆ ಬೀಜ ಖರೀದಿಸಲು ಆರ್ಥಿಕ ನೆರವು ಗರಿಷ್ಠ 2 ಹೆ.ಗೆ ನೀಡಬಹುದಾಗಿದೆ.

**ಪ್ರಮಾಣಿತ ಬಿತ್ತನೆ ಬೀಜ ವಿತರಣೆಗೆ ಆರ್ಥಿಕ ನೆರವು ಕೆಳಕಂಡಂತಿರುತ್ತದೆ.**

ಒರಟು ಧಾನ್ಯಗಳು:

1. ಸಂಕರ ತಳಿಗಳು (ಹೈಬ್ರಿಡ್ಸ್): ಬಿತ್ತನೆ ಬೀಜದ ಶೇ. 50 ರಷ್ಟು ಅಥವಾ ಪ್ರತಿ ಕೆಜಿಗೆ ರೂ.50/– ಯಾವುದು ಕಡಿಮೆಯೋ ಅದು.
2. 10 ವರ್ಷದಿಂದೀಚೆಗೆ ಬಿಡುಗಡೆಯಾದ ಅಧಿಕ ಇಳುವರಿ ತಳಿಗಳು: ಬಿತ್ತನೆ ಬೀಜದ ಬೆಲೆಯ ಶೇ.50 ಅಥವಾ ಪ್ರತಿ ಕೆಜಿಗೆ ರೂ. 15/– ಯಾವುದು ಕಡಿಮೆಯೋ ಅದು.

(ii) ಕೇಂದ್ರ ಸರ್ಕಾರದ ಸ್ವಾಮ್ಯದ ಬೀಜ ಸಂಸ್ಥೆಗಳಾದ NSC/SFCI ಸಂಸ್ಥೆಗಳು ಬೀಜ ಸರಬರಾಜು ಮಾಡಿದಲ್ಲಿ ಸಹಾಯಧನವನ್ನು ನೇರವಾಗಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಹಂಚಿಕೆ ಮಾಡಿದ ಅನುದಾನದಿಂದ ಸಂಸ್ಥೆಗಳಿಗೆ ಮರು ಪಾವತಿ ಮಾಡುತ್ತದೆ.

**ಸೂಚನೆ: ಈ ಮಾರ್ಗಸೂಚಿಗಳು ಕೇಂದ್ರ ಸರ್ಕಾರದಿಂದ ಹೊರಡಿಸಲಾದ ಇಂಗ್ಲೀಷ್ ಭಾಷೆಯ ಮಾರ್ಗಸೂಚಿಗಳ ಮುಖ್ಯ ಅಂಶಗಳ ಸಂಕ್ಷಿಪ್ತ ಅನುವಾದವಾಗಿದ್ದು ಸ್ಪಷ್ಟತೆಯ ಪ್ರಶ್ನೆ ಉದ್ಭವಿಸಿದಲ್ಲಿ ಇಂಗ್ಲೀಷ್‌ನಲ್ಲಿರುವ ಮಾರ್ಗಸೂಚಿಗಳನ್ನು ನೋಡುವುದು ಮತ್ತು ಅವುಗಳನ್ನೆ ಪಾಲಿಸತಕ್ಕದ್ದು.**

ಅನುಬಂಧ–2ಅ

**ರಾಗಿ, ಜೋಳ, ಸಜ್ಜೆ ಮತ್ತು ಇತರೆ ತೃಣ ಧಾನ್ಯಗಳ ಪ್ರಾತ್ಯಕ್ಷಿಕೆಗಳಿಗೆ ಘಟಕವಾರು ವೆಚ್ಚದ ವಿವರಗಳು**

| ಕ್ರ.ಸಂ. | ವಿವರ | ಪ್ರತಿ ಹೆ.ಗೆ ವೆಚ್ಚ (ರೂ) |
|---|---|---|
| 1. | ಬಿತ್ತನೆ ಬೀಜ | 1000 |
| 2. | ಸಾವಯವ ಗೊಬ್ಬರ | 1575 |
| 3. | ಲಘು ಪೋಷಕಾಂಶ<br>ಅ. ಸತುವಿನ ಸಲ್ಫೇಟ್<br>ಆ.ಬೋರಾಕ್ಸ | <br>400<br>300 |
| 4. | ಜಿಪ್ಸಂ | 385 |
| 5. | ಜೈವಿಕಗೊಬ್ಬರ | 100 |
| 6. | ಬೀಜೋಪಚಾರ ಔಷಧಿ | 90 |
| 7. | ಸಸ್ಯ ಸಂರಕ್ಷಣಾ ಔಷಧಿ | 350 |
| 8. | ಕ್ಷೇತ್ರೋತ್ಸವ | 250 |
| 9. | ಪ್ರಚಾರ ಸಾಮಗ್ರಿಯ ವಿತರಣೆ | 250 |
| 10. | ವಿಜ್ಞಾನಿಗಳ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿ | 300 |
| | ಒಟ್ಟು | 5000 |

**ಸೂಚನೆ: ಸಾವಯವ ಗೊಬ್ಬರವನ್ನು ಮಾತ್ರ ನೀಡುವುದು**

**(ಮೇಲೆ ತಿಳಿಸಿದ ಘಟಕಗಳ ವೆಚ್ಚದಲ್ಲಿ ಉಳಿತಾಯವಾದಲ್ಲಿ ಸಾವಯವ ಗೊಬ್ಬರ ಘಟಕಕ್ಕೆ ಬಳಸಿಕೊಳ್ಳುವುದು)**

ಅನುಬಂಧ–2ಆ

**ಮುಸುಕಿನ ಜೋಳ ಪ್ರಾತ್ಯಕ್ಷಿಕೆಗಳ ಘಟಕವಾರು ವಿವರಗಳು**

| ಕ್ರ.ಸಂ. | ವಿವರ | ಪ್ರತಿ ಹೆ.ಗೆ ವೆಚ್ಚ (ರೂ) |
|---|---|---|
| 1. | ಬಿತ್ತನೆ ಬೀಜ | 1500 |
| 2. | ಸಾವಯವ ಗೊಬ್ಬರ | 1075 |
| 3. | ಲಘು ಪೋಷಕಾಂಶ<br>ಅ. ಸತುವಿನ ಸಲ್ಫೇಟ್<br>ಆ.ಬೋರಾಕ್ಸ | <br>400<br>300 |
| 4. | ಜಿಪ್ಸಂ | 385 |
| 5. | ಜೈವಿಕಗೊಬ್ಬರ | 100 |
| 6. | ಬೀಜೋಪಚಾರ ಔಷಧಿ | 90 |
| 7. | ಕ್ಷೇತ್ರೋತ್ಸವ | 250 |
| 8. | ಪ್ರಚಾರ ಸಾಮಗ್ರಿಯ ವಿತರಣೆ | 250 |
| 9. | ವಿಜ್ಞಾನಿಗಳ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿ | 300 |
| 10. | ಸಸ್ಯಸಂರಕ್ಷಣಾ ಔಷಧಿಗಳು | 350 |
| | ಒಟ್ಟು | 5000 |

**ಸೂಚನೆ: ಸಾವಯವ ಗೊಬ್ಬರವನ್ನು ಮಾತ್ರ ನೀಡುವುದು**

**(ಮೇಲೆ ತಿಳಿಸಿದ ಘಟಕಗಳ ವೆಚ್ಚದಲ್ಲಿ ಉಳಿತಾಯವಾದಲ್ಲಿ ಸಾವಯವ ಗೊಬ್ಬರ ಘಟಕಕ್ಕೆ ಬಳಸಿಕೊಳ್ಳುವುದು)**

ಅನುಬಂಧ–2ಅ ಮತ್ತು ಆ ರಲ್ಲಿನ *ಪರಿಕರಗಳನ್ನು ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ದರ ಕರಾರಿನನ್ವಯ ಖರೀದಿಸಿ ಪ್ರಾತ್ಯಕ್ಷಿಕೆಗೆ ಆಯ್ಕೆಯಾಗಿರುವ ಫಲಾನುಭವಿಗಳಿಗೆ ನೀಡುವುದು.*

## ಅನುಬಂಧ–3

# ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ–ಒರಟು ಧಾನ್ಯಗಳ ಪ್ರಾತ್ಯಕ್ಷಿಕೆ ಕೈಗೊಳ್ಳುವಾಗ ಒತ್ತು ನೀಡಬೇಕಾದ/ ಅನುಸರಿಸಬೇಕಾದ ಅಂಶಗಳು

1. ಸ್ಥಳೀಯ ಪರಿಸ್ಥಿತಿಗನುಗುಣವಾಗಿ ತಾಂತ್ರಿಕತೆಯನ್ನು ಆಯ್ಕೆ ಮಾಡುವುದು (ಕೃಷಿ ವಿಜ್ಞಾನಿಗಳ ಸಹಯೋಗದೊಂದಿಗೆ) ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಗ್ರಾಮ ಪಂಚಾಯಿತಿಗಳ ಸಹಯೋಗದೊಂದಿಗೆ ತಾಂತ್ರಿಕತೆಗಳಿಗೆ ಸ್ಪಂದಿಸುವಂತಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

2. ಆಯ್ಕೆ ಮಾಡಿದ ಫಲಾನುಭವಿಗಳಲ್ಲಿ ಶೇ.16 ರಷ್ಟು ಪ.ಜಾತಿ/ಶೇ.8 ರಷ್ಟು ಪ.ವರ್ಗ ಶೇ.33 ರಷ್ಟು ಸಣ್ಣ / ಅತಿ ಸಣ್ಣ ರೈತರು ಮತ್ತು ಮಹಿಳೆಯರಿರುವಂತೆ ಗಮನಿಸುವುದು. ಆಯ್ಕೆ ಮಾಡಿದ ರೈತರಿಗೆ ಇಲಾಖೆಯ ಇತರೆ ಯೋಜನೆಗಳಡಿ ಲಭ್ಯವಿರುವ ಅನುದಾನ ಬಳಸಿಕೊಂಡು ತರಬೇತಿ ನೀಡುವುದು.

3. ಕಡ್ಡಾಯವಾಗಿ ಪ್ರತಿ ಪ್ರಾತ್ಯಕ್ಷಿಕೆ 100 ಹೆ. ವಿಸ್ತೀರ್ಣವುಳ್ಳ ಗುಚ್ಚ ಪ್ರಾತ್ಯಕ್ಷಿಕೆಯಾಗಿರಬೇಕು.

4. ಶೇ.30 ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು.
5. ಬೀಜೋಪಚಾರವನ್ನು ಕಡ್ಡಾಯವಾಗಿ ಮಾಡುವುದು.
6. ಸಾಲು ಬಿತ್ತನೆ (Ridge Furrow Method of Sowing) ಕುರಿತು ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
7. ಸತುವಿನ ಸಲ್ಫೇಟ್ (21%) ಬಳಕೆಗೆ ಒತ್ತು ನೀಡುವುದು
8. ಅವಶ್ಯಕತೆಯಿದ್ದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಬಳಸುವುದು.
9. ಜೈವಿಕ ಗೊಬ್ಬರಗಳ ಬಳಕೆಗೆ ಒತ್ತು ನೀಡುವುದು
10. ಸಮಗ್ರ ಪೀಡೆ ನಿರ್ವಹಣೆಯ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು.
11. ತೃಣಧಾನ್ಯಗಳಾದ (ಜೋಳ, ಸಜ್ಜೆ, ರಾಗಿ, ಸಾಮೆ ಮತ್ತು ನವಣೆ) ಬೀಜೋತ್ಪಾದನೆ ಕೈಗೊಳ್ಳುವುದು.
12. ಸಂಕರಣ ಜೋಳ ಮತ್ತು ಸಜ್ಜೆ ತಳಿಗಳನ್ನು ಬಳಸುವುದು.
13. ಮುಸುಕಿನ ಜೋಳದಲ್ಲಿ ಅಂತರ ಬೆಳೆಯಾಗಿ ಉದ್ದು/ತೊಗರಿ/ಹೆಸರುಕಾಳುಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.

14. ಪ್ರಾತ್ಯಕ್ಷಿಕೆಗಳಲ್ಲಿ ಬರುವ ಪ್ರತಿ ರೈತರ ಕನಿಷ್ಠ 0.4 ಹೆ. ವಿಸ್ತೀರ್ಣ ಪ್ರಾತ್ಯಕ್ಷಿಕೆಯಡಿ ಬರುವಂತಿರಬೇಕು

15. ಆಯ್ಕೆ ಮಾಡಿದ ಎಲ್ಲಾ ರೈತರ Bench Mark Survey ಕಡ್ಡಾಯವಾಗಿ ಕೈಗೊಂಡು ವಹಿಯಲ್ಲಿ ದಾಖಲಿಸುವುದು. ಪ್ರಾತ್ಯಕ್ಷಿಕೆಗಳ ಬಗ್ಗೆ ಮಾಹಿತಿ ಫಲಕವನ್ನು ಕಡ್ಡಾಯವಾಗಿ ತಾಕುಗಳ ಬಳಿ ಪ್ರದರ್ಶಿಸುವುದು–ಮಾದರಿ ಫಲಕದಲ್ಲಿ ಇರಬೇಕಾದ ಮಾಹಿತಿಗಳನ್ನು Operational Guidelines book of NFSM Page No.9 ರಲ್ಲಿರುವಂತೆ ಬರೆಯಿಸುವುದು.

16. ಸಕಾಲಕ್ಕೆ ಪರಿಕರಗಳು ರೈತರಿಗೆ ದೊರಕುವಂತೆ ವ್ಯವಸ್ಥೆ ಮಾಡುವುದು.

17. ಮುಖ್ಯ ಹಂತಗಳಲ್ಲಿ ತಪ್ಪದೇ ಪ್ರಾತ್ಯಕ್ಷಿಕೆ ತಾಕುಗಳಿಗೆ ಇಲಾಖೆಯ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಭೇಟಿ ನೀಡುವುದು.

18. ಹೊಸ ತಳಿಗಳನ್ನು ಪ್ರಾತ್ಯಕ್ಷಿಕೆಯಡಿ ಉಪಯೋಗಿಸಿದ್ದಲ್ಲಿ ಅಂತಹ ಪ್ರಾತ್ಯಕ್ಷಿಕೆ ತಾಕುಗಳಿಂದ ಪ್ರಮಾಣಿತ ಬೀಜಗಳನ್ನು ಉತ್ಪಾದಿಸಲು ಕ್ರಮಕೈಗೊಳ್ಳುವುದು.

19. ಗಮನಿಸಿದ ಮುಖ್ಯ ಅಂಶಗಳನ್ನು ವಹಿಗಳಲ್ಲಿ ದಾಖಲಿಸುವುದು.

20. ಪ್ರಾತ್ಯಕ್ಷಿಕೆ ತಾಕುಗಳಲಿ ತಪ್ಪದೇ ಕ್ಷೇತ್ರೋತ್ಸವ ಏರ್ಪಡಿಸುವುದು

21. ತಾಕುಗಳಲ್ಲಿ ಪಡೆದ ಇಳುವರಿಯನ್ನು ದಾಖಲು ಮಾಡುವುದು.

22. ಬೆಳೆಯ ವಿವಿಧ ಹಂತಗಳಲ್ಲಿ ಪ್ರಾತ್ಯಕ್ಷಿಕೆ ತಾಕುಗಳ ಛಾಯಾ ಚಿತ್ರಗಳನ್ನು ತೆಗೆಯುವುದು.

23. ಯಶೋಗಾಥೆಗಳನ್ನು ತಯಾರು ಮಾಡುವುದು.

24. ಕಾಲಕಾಲಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು.

25. ಪ.ಜಾತಿ/ಪ.ವರ್ಗ, ಸಣ್ಣ ಮತ್ತು ಅತಿ ಸಣ್ಣ ರೈತರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಪ್ರಗತಿ ವರದಿಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

26. ಪ್ರಾತ್ಯಕ್ಷಿಕೆ ತಾಕುಗಳ ಫಲಿತಾಂಶವನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಡೀಕರಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

**ಉತ್ತಮವೆಂದು ಕಂಡುಬಂದ ತಾಂತ್ರಿಕತೆಗಳನ್ನು ಹೆಚ್ಚಿನ ರೈತರು ಅಳವಡಿಸಿಕೊಳ್ಳುವಂತೆ ಪ್ರಚಾರ ಕಾರ್ಯಕೈಗೊಳ್ಳುವುದು.**